

# ಮತ್ತೆ ಮಳೆ ಹುಯ್ಯುತಿದೆ ಹೊಗೇನಕಲ್ ನೆನಪಾಗುತಿದೆ

ಹೊಗೇನಕಲ್ ಜಲಪಾತದ ಸನ್ನಿಧಿಯಲ್ಲಿ ನಿಂತರೆ ಮೈಮನಗಳ ತುಂಬ ಭೋರ್ಗರೆತದ್ದೇ ಸದ್ದು. ಅದು ಜಲಧಾರೆಯ ಭೋರ್ಗರೆತ ಮಾತ್ರವಲ್ಲ – ನೀರಿನ ಜೊತೆಗೆ ನೆನಪುಗಳೂ ಭೋರ್ಗರೆಯತೊಡಗುತ್ತವೆ. ಮಳೆಗಾಲದ ಈ ದಿನಗಳು ಹೊಗೇನಕಲ್ ಕಣ್ತುಂಬಿಕೊಳ್ಳಲು ಸೂಕ್ತ ದಿನಗಳು. ನೀರು ಮತ್ತು ನೆನಪುಗಳ ಲಹರಿ ದೇಹವನ್ನೂ ಮನಸ್ಸನ್ನೂ ಹಗುರಗೊಳಿಸಬಲ್ಲದು.

■ ಬಿ. ಬಸವರಾಜು

ಅದು ಪ್ರಕೃತಿ ಸೌಂದರ್ಯದ ಸ್ವರ್ಗಲೋಕ. ಎತ್ತ ನೋಡಿದರೂ ಕುಶಲ ಶಿಲ್ಪಿಗಳು ಸಾವಧಾನದಿಂದ ಕೆತ್ತಿದಂತೆ ಕಾಣುವ ಅಲಂಕಾರಿಕ ಕಲ್ಲುಗಳು. ಹಸಿರು ಪತ್ತಲವುಟ್ಟು ಮದುವಣಗಿತ್ತಿಯಂತೆ ಕಂಗೊಳಿಸುವ ಕಾನನ. ಇದರ ಮಧ್ಯೆ ಹಾಲ್ನೊರೆಯಂತೆ ಧುಮ್ಮಿಕ್ಕುವ ಜಲಲ ಜಲಧಾರೆ. ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯಲು ಇನ್ನೇನು ಬೇಕು?

ರಾಜ್ಯದ ಗಡಿಭಾಗದಲ್ಲಿರುವ ಹೊಗೇನಕಲ್ ಜಲಪಾತ ರುದ್ರ ರಮಣೀಯ ಸೌಂದರ್ಯಕ್ಕೆ ಹೆಸರಾದುದು. ಗಡಿ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ–ತಮಿಳುನಾಡಿನ ನಡುವೆ ವಿವಾದ ಇರಬಹುದು. ಆದರೆ ರಾಜ್ಯದ ಜೀವನಾಡಿಯಾದ ಕೊಡಗಿನ ಕಾವೇರಿ ಮಾತ್ರ ತನ್ನ ಬೆಡಗು ಬಿನ್ನಾಣದ ಮೂಲಕ ಎರಡೂ ನಾಡುಗಳನ್ನು ಬೆಸೆಯುತ್ತಾಳೆ; ನೋಡುಗರನ್ನು ಮೈಮರೆಸುತ್ತಾಳೆ.

ದಕ್ಷಿಣಭಾರತದ ನಯಾಗರ ಎಂದು ಸೌಂದರ್ಯೋಪಾಸಕರಿಂದ ಕರೆಸಿಕೊಳ್ಳುವ ಹೊಗೇನಕಲ್‌ನಲ್ಲೀಗ ಪ್ರವಾಸೋದ್ಯಮ ಚಟುವಟಿಕೆಗಳು ಗರಿಗೆದರಿದೆ. ನೀರಿಲ್ಲದೆ ಸಹಜ ಚೆಲುವು ಕಳೆದುಕೊಂಡು ಸೊರಗಿದ್ದ ಜಲಪಾತ ಈಗ ನಳನಳಿಸುತ್ತಿದೆ, ಧುಮ್ಮಿಕ್ಕುತ್ತಿದೆ. ಹೊಸ ಜೀವನೋತ್ಸಾಹದಿಂದ ಧುಮ್ಮಿಕ್ಕುವ ಜಲಧಾರೆ ಕಲ್ಲುಬಂಡೆಗಳಿಗೂ ಜೀವಕಳೆ ತಂದಿದೆ.

ಎತ್ತ ನೋಡಿದರೂ ಬೆಟ್ಟಗಳ ರಾಶಿ, ಹಸಿರು ಸೌಂದರ್ಯದ ಕಾಶಿಯಂತೆ ಗೋಚರಿಸುವ ಈ ಜಲಪಾತ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕು ಕೇಂದ್ರದಿಂದ 100 ಕಿ.ಮೀ. ದೂರದ ಗಡಿಭಾಗದಲ್ಲಿದೆ. ದಟ್ಟ ಕಾಡಿನ ನಡುವೆ 70 ಅಡಿಗಳಿಗೂ ಹೆಚ್ಚು ಎತ್ತರದಿಂದ ಧುಮುಕುವ ನೀರಿನಿಂದ 50ಕ್ಕೂ ಹೆಚ್ಚು ಜಲಪಾತಗಳು ರೂಪುಗೊಂಡಿವೆ. ಮೇಲಿನಿಂದ ಬಂಡೆಗಳ ಮೇಲೆ

